O.S .No. 266/2022
PW-1

ದಿನಾಂಕ: 06.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ.ಕೆ. ವಕೀಲರಿಂದ

ಪ್ರತಿವಾದಿ ನನಗೆ 7-8 ವರ್ಷಗಳಿಂದ ಪರಿಚಿತರು. ನಾನು ವ್ಯವಸಾಯ ಹಾಗೂ ಕಿರಾಣಿ ಅಂಗಡಿಯನ್ನು ನಡೆಸುತ್ತೇನೆ. ನನ್ನ ತಂದೆ ನನ್ನೊಂದಿಗೆ ನನ್ನ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಪ್ರತಿವಾದಿ ಏನು ಕೆಲಸ ಮಾಡುತ್ತಾರೆಂದರೆ ಸಾಕ್ಷಿ ನಿರ್ವಾಹಕ ಕೆಲಸ ಮಾಡುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹರೆನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ನೀವು ಹನಗೋಡಿನ ವಾಸಿ ಎಂದರೆ ಸರಿ. ಪ್ರತಿವಾದಿ ನಮ್ಮ ಊರಿನ ಸಂಬಂಧಿಕರಲ್ಲಿ ಮದುವೆಯಾಗಿರುವುದರಿಂದ ಪರಿಚಯ. ಪ್ರತಿವಾದಿ ನಿಮ್ಮ ಬಳಿ ಯಾವ ಉದ್ದೇಶಕ್ಕಾಗಿ, ಯಾವಾಗ ಸಾಲ ಕೇಳಿದರು ಎಂದರೆ ಸಾಕ್ಷಿ ವೈಯಕ್ತಿಕ ಸಮಸ್ಯೆಗಾಗಿ ಸಾಲ ಕೇಳಿದರು, ದಿಃ15.11.2019 ರ ಒಂದು ತಿಂಗಳ ಹಿಂದೆ ಸಾಲ ಕೇಳಿದರು ಎಂದು ಹೇಳುತ್ತಾರೆ. ಆಗ ನನಗೆ 27 ವರ್ಷ ವಯಸ್ಸಾಗಿತ್ತು. ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿ ಅಷ್ಟಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ನಿಮಗೆ 28 ವರ್ಷ ಎಂದು ಬರೆಸಿದ್ದೀರಿ ಎಂದರೆ ಸರಿ.

ನಿಮ್ಮ ವ್ಯಾಪಾರದಿಂದ ತಿಂಗಳಿಗೆ ಎಷ್ಟು ಆದಾಯ ಮಾಡುತ್ತೀರಿ ಎಂದರೆ ಸಾಕ್ಷಿ 20-30 ಸಾವಿರ ಎಂದು ಹೇಳುತ್ತಾರೆ. ಪ್ರತಿವಾದಿಗೆ ಸಾಲವನ್ನು ಹೇಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನಗದು ಮುಖೇನ ಎಂದು ಹೇಳುತ್ತಾರೆ. ವ್ಯವಸಾಯದಿಂದ ವರ್ಷಕ್ಕೆ ಎಷ್ಟು ಆದಾಯ ಮಾಡುತ್ತೀರಿ ಎಂದರೆ ಸಾಕ್ಷಿ 7-8 ಲಕ್ಷ ಎಂದು ಹೇಳುತ್ತಾರೆ. ವ್ಯಾಪಾರದಲ್ಲಿ ವರ್ಷಕ್ಕೆ ಎಷ್ಟು ಆದಾಯ ಮಾಡುತ್ತೀರಿ ಎಂದರೆ ಸಾಕ್ಷಿ 2 ಲಕ್ಷ ಆಗಬಹುದು ಎಂದು ಹೇಳುತ್ತಾರೆ. ನೀವು ತೆರಿಗೆ ಪಾವತಿ ಮಾಡುತ್ತೀರಾ ಎಂದರೆ ಸಾಕ್ಷಿ ಅದನ್ನು ನನ್ನ ತಂದೆ ನೋಡಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ನೀವು ಯಾವುದೇ ಅಂಗಡಿ ಇಟ್ಟಿಲ್ಲ, ವ್ಯಾಪಾರವೂ ಮಾಡುತ್ತಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಹಾಗೂ ನಿಮ್ಮ ತಂದೆಯ ಹೆಸರಿನಲ್ಲಿ ಯಾವುದೇ ಭೂಮಿ ಇಲ್ಲ, ಆದರೂ ವ್ಯವಸಾಯದಿಂದ 7-8 ಲಕ್ಷ ಆದಾಯ ಮಾಡಿದೆ ಎಂದು ಸುಳ್ಳು ಹೇಳಿ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ವ್ಯವಸಾಯ ಹಾಗೂ ಅಂಗಡಿ

ವ್ಯಾಪಾರ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಮಗೆ ಯಾವುದೇ ವ್ಯಾಪಾರ ಹಾಗೂ ಜಮೀನು ಇಲ್ಲದೇ ಇರುವುದರಿಂದ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಒದಗಿಸಲು ಮಾಹಿತಿ ಸಿಕ್ಕಿಲ್ಲದೇ ಇರುವುದರಿಂದ ಒದಗಿಸಿಲ್ಲ ಎಂದು ಹೇಳುತ್ತಾರೆ.

ದಿಃ15.11.2019 ರಂದು ಪ್ರತಿವಾದಿ ಸಾಲ ಪಡೆಕೊಳ್ಳುವ ಕಾಲಕ್ಕೆ ಯಾರ್ಯಾರು ಇದ್ದರು ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ಸಾಕ್ಷಿದಾರರಾದ ವೆಂಕಟೇಶ ಮತ್ತು ಕರೀಗೌಡರು ಇದ್ದರು ಎಂದು ಹೇಳುತ್ತಾರೆ. ಸಾಕ್ಷಿ-ವೆಂಕಟೇಶ ರವರು ಬಿ.ಆರ್. ಕಾಲೋನಿಯ ವಾಸಿ. ಬಿ.ಆರ್. ಕಾಲೋನಿ ನಿಮ್ಮ ಊರಿನ ಪಕ್ಕದಲ್ಲಿದೆ ಎಂದರೆ ಸರಿ. ಸದರಿ ವೆಂಕಟೇಶ ರವರು ನಿಮ್ಮ ಗ್ರಾಹಕ ಎಂದರೆ ಸರಿ. ಪ್ರತಿವಾದಿ ಸಾಲ ಪಡೆದು ಚೆಕ್ ನ್ನು ನೀಡಿದ್ದರೂ ಎಂದು ಹೇಳಿದ್ದು, ಅದನ್ನು ಬರವಣಿಗೆ ಮಾಡಿ ಕೊಡಲಾಯಿತೋ, ಹಾಗೆ ಕೊಡಲಾಯಿತೋ ಎಂದರೆ ಸಾಕ್ಷಿ ಬರವಣಿಗೆ ಮಾಡಿ ಕೊಡಲಾಯಿತು ಎಂದು ಹೇಳುತ್ತಾರೆ. ಸಾಲ ಕೊಡಬೇಕಾದರೆ ಚೆಕ್ ನ್ನು ಬರವಣಿಗೆ ಮಾಡಿ ಕೊಡಲಾಯಿತಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಪಿ-1 ನ್ನು ಪ್ರತಿವಾದಿಯೇ ಬರೆದಿರುತ್ತಾರೆ. ಪ್ರತಿವಾದಿ ನಿರ್ವಾಹಕನಾಗಿದ್ದು, ಅವರಿಗೆ ಸಾಲದ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇದ್ದುದ್ದರಿಂದ ಪಡೆದಿರುತ್ತಾರೆ ಎಂದು ಹೇಳುತ್ತಾರೆ.

ಪ್ರತಿವಾದಿ ನಿಮ್ಮ ತಂದೆಯ ಆತ್ಮೀಯರು ಎಂದರೆ ಸರಿ. ನಿಮ್ಮ ತಂದೆ ಪ್ರತಿವಾದಿಯಿಂದ ಆಗಾಗ ಹಣ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ಹಾಗೂ ಪ್ರತಿವಾದಿಯ ನಡುವೆ ಹಣದ ವ್ಯವಹಾರ ನಡೆಯುತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರುವ ಹಾಗೆ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ ಹಾಗೂ ಪ್ರತಿವಾದಿಯ ನಡುವೆ ಹಣದ ವ್ಯವಹಾರ ಇದ್ದುದ್ದರಿಂದ 2015 ರಲ್ಲಿ ವ್ಯವಹಾರದ ಸಂಬಂಧ ಒಂದು ಪ್ರತಿವಾದಿಯ ಚೆಕ್ ನ್ನು ಕೊಡಲಾಗಿತ್ತು, ಸದರಿ ವ್ಯವಹಾರ ಮುಕ್ತಯವಾಗಿದ್ದರೂ, ಸದರಿ ಚೆಕ್ ನ್ನು ನಿಮ್ಮ ತಂದೆ ಕೊಡದೇ ಹಾಗೆ ಇಟ್ಟು ಕೊಂಡಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ಸದರಿ ಚೆಕ್ ನ್ನು ದುರುಪಯೋಗಪಡಿಸಿಕೊಂಡು ನಿಮ್ಮ ಕಡೆಯಿಂದ ದಾವೆಯನ್ನು ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಾಲದ ಅವಶ್ಯಕತೆ ಇಲ್ಲ, ಪ್ರತಿವಾದಿಯೇ ಬೇರೆಯವರಿಗೆ ಸಾಲ ಕೊಡುವಷ್ಟು ಸೂಸ್ಥಿತಿಯಲ್ಲಿದ್ದಾರೆ, ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ಹಾಗೂ ಪ್ರತಿವಾದಿಯ ನಡುವೆ 2015 ರಲ್ಲಿ ಹಣದ ವ್ಯವಹಾರ ನಡೆದಿದ್ದು, ನಿಪಿ-1 ಸದರಿ

ವ್ಯವಹಾರದ ಸಂಬಂಧ ಚೆಕ್ ಆಗಿದ್ದರಿಂದ ಕ್ರಿಮಿನಲ್ ಪ್ರಕರಣ ದಾಖಲಿಸದೇ, ಪರಿಹಾರಕ್ಕೋಸ್ಕರ ಅಸಲು ದಾವೆ ಹೂಡಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ಒಂದು ದಿನ ತಡವಾದ್ದರಿಂದ, ಈ ದಾವೆ ಹೂಡಿರುತ್ತೇನೆ ಎಂದು ಹೇಳುತ್ತಾರೆ. ಹಣದ ವ್ಯವಹಾರ ನಡೆಯಬೇಕಾದರೆ ಹಾಜರಿದ್ದರು ಎಂದು ಹೇಳುವ ಸಾಕ್ಷಿದಾರರನ್ನು ದಾವೆಯಲ್ಲಿ ಸಾಕ್ಷ್ಯ ಮಾಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.